Sri H. SIDDAVEERAPPA.—I have not said it.

Mr. SPEAKER.—Who said so? You presume and put a question.

ಶ್ರೀ ಕೆ. ವಿ. ಶಂಕರಗೌಡ.—ಡೆಪ್ಯುಟಿ ರಿಜಿಸ್ಟ್ರಾರ್ ರವರ ಜಾಗವನ್ನು ಭರ್ತಿ ಮಾಡದೇಯಿರಲು ಕಾರಣವೇನು?

Sri H. SIDDAVEERAPPA.—As a measure of economy.

Sri K. V. SHANKARA GOWDA.—What is the opinion of the Registrar in the matter, Sir?

Sri H. SIDDAVEERAPPA.—He has not definitely told me that he is not able to shoulder the responsibilities. As a matter of fact, Government have been considering whether it is feasible to fill up that post. Any way we have kept it vacant as a measure of economy.

Mr. SPEAKER.—Anyhow, there is the answer to (*c*).

Organising leather industries in the State.

Q.—300. Sri K. PRABHAKAR (Nelamangala—Scheduled Castes).—

Will the Government be pleased to state:—

(*a*) the progress made in the field of organising Leather Industries in the State;

(*b*) whether it is not profitable for the State to take charge of this industry and organise it entirely on co-operative basis?

A.—Sri H. SIDDAVEERAPPA (Minister for Home and Industries).—

(*a*) Leather Industries have been organised in the State on a factory scale as well as on a cottage industry basis. The Mysore Chrome Tanning Company, Ltd., which is a Government aided concern, is engaged in the tanning and manufacture of leather and leather goods on a factory scale.

In so far as cottage leather industries are concerned, arrangements have been made by the Department of Industries and Commerce to encourage these industries by opening training *cum* production centres in a few suitable places in the State under the three-year Cottage Industries Development Plan sanctioned in 1948. There are at present two such centres located at Birur and Hulikunte where training is given to Artisans in Leather Stitching, Flaying and Tanning.

A Tannery and Leather Stitching Centre which was established at Doddasiddavvanahalli as a Cottake Industry Centre was later transferred to the control of the District Board, Chitaldrug. Proposals for the retransfer of this Centre to the Department and its expansion are under consideration. It is also under consideration to open a few more Cottage Industries Centres for leather stitching and leather goods manufacture if finances permit.

There is also a leather stitching section in the Government Industrial School at Channapatna where training in the manufacture of chappals, shoes and other leather articles is imparted to trainees.

(*b*) Although it is desirable to have a co-operative form of organisation for the running of these Cottage Industries Centres, it is considered that in the initial stages, say for five years in the beginning, these centres should be organised and managed by the Department of Industries and Commerce as the co-operative system has not yet sufficiently developed among the poorer scheduled classes of people who are mostly engaged in this industry.

ಶ್ರೀ ಕೆ. ಪ್ರಭಾಕರ್.—ಚರ್ಮದ ಕೈಗಾರಿಕೆಯಲ್ಲಿ ಶಿಕ್ಷಣ ಕೇಂದ್ರಗಳನ್ನೇರ್ಪಡಿಸಲಾಗುತ್ತಿದೆಯೆಂದು ಹೇಳಲಾಗಿದೆ; ಈ ರೀತಿಯ ಕೇಂದ್ರಗಳಲ್ಲಿ ಇದುವರೆಗೆ ಎಷ್ಟು ಜನರಿಗೆ ಶಿಕ್ಷಣ ಕೊಟ್ಟು ಉತ್ತೀರ್ಣರಾಗಿ ಮಾಡಿದ್ದೀರಿ?

*ಶ್ರೀ ಎಚ್. ಸಿದ್ಧವೀರಪ್ಪ.—ತಮಗೆ ಗೊತ್ತಿರುವ ಹಾಗೆ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪೆನಿಯಲ್ಲಿ ಶಿಕ್ಷಣ ಕೊಡಲಾಗುತ್ತಿದೆ. ಬೀರೂರು ಮತ್ತು ಹುಲಿಕುಂಟೆಯಲ್ಲಿ ಶಿಕ್ಷಣ ಕೊಡುತ್ತಿದ್ದೇವೆ, ಜನ್ನಪಟ್ಟಣದ ಸರ್ಕಾರಿ ಕೈಗಾರಿಕೆ ಸ್ಕೂಲಿನಲ್ಲಿ ಚಪ್ಪಲ ಮತ್ತು ಪೂಗಳನ್ನು ಹೊಲೆಯುವುದರಲ್ಲಿ ಶಿಕ್ಷಣ ಕೊಡುತ್ತಿದ್ದೇವೆ. ದೊಡ್ಡ ಸಿದ್ದವ್ವನಹಳ್ಳಿಯಲ್ಲಿಯೂ ಇತ್ತು; ಇತ್ತೀಚೆಗೆ

(ಶ್ರೀ ಎಚ್. ಸಿದ್ದವೀರಪ್ಪ)

ನಿಂತುಹೋಗಿದ್ದುದನ್ನು ಈಗ ಮುಂದುವರಿಸಬೇಕೆಂದು ಪ್ರಯತ್ನಮಾಡುತ್ತಿದ್ದೇವೆ. ಎಷ್ಟು ಜನರು ಶಿಕ್ಷಣ ಪಡೆದಿದ್ದಾರೆಂದು ಹೇಳಲು ನೋಟೀಸ್ ಬೇಕು.

ಶ್ರೀ ಕೆ. ಪ್ರಭಾಕರ್.—ಮೈಸೂರು ಕ್ರೋಂ ಟ್ಯಾನಿಂಗ್ ಕಂಪೆನಿಯಲ್ಲಿ ಶಿಕ್ಷಣವನ್ನು ಕೊಡುತ್ತಾರೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವರಿಗೆ ಕೊಡುವುದಕ್ಕೆ ವ್ಯವಸ್ಥೆಮಾಡಿದೆ.

ಶ್ರೀ ಕೆ. ಪ್ರಭಾಕರ್.—ಈಗ ಕೊಟ್ಟಿರುವ ಶಿಕ್ಷಣದಿಂದ ಅವರು ಕೈಗಾರಿಕೆಯನ್ನೂ ಮಾಡಲಾರರು, ಕೂಲಿ ಕೆಲಸವನ್ನು ಕೂಡ ಮಾಡಲಾರರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಇಂಥಾ ವಿಷಯವನ್ನು ಗಮನಕ್ಕೆ ತಂದರೆ ಸರಿಯಾದ ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ್.—ಒಟ್ಟು ಈ ಯೋಜನೆಯಿಂದ ಸರ್ಕಾರದ ಉದ್ದೇಶ ನೆರವೇರುವುದಿಲ್ಲ, ಇದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಈ ಕೈಗಾರಿಕೆಯನ್ನು ಅಭಿವೃದ್ಧಿಮಾಡಬೇಕೆಂಬುದೇ ನಮ್ಮ ಆಶಯ. ಇಂಡಿಯಾ ಸರ್ಕಾರದ ಕೈಗಾರಿಕೆ ಮಿನಿಸ್ಟ್ರಿಯವರು ಕೂಡ ಈ ಕೈಗಾರಿಕೆಯನ್ನು ಮುಂದುವರಿಸಿ ಅಭಿವೃದ್ಧಿಮಾಡಬೇಕೆಂದು ಕಾತುರರಾಗಿದ್ದಾರೆ, ಸದುದ್ದೇಶವುಳ್ಳವರಾಗಿದ್ದಾರೆ. ಅಲ್ಲನ ಡಾ॥ ನಾಗರಾಜರಾವ್ ಎಂಬವರು ಈ ತಿಂಗಳು ಇಲ್ಲಿಗೆ ಬರುತ್ತಾರೆ. ಅವರಲ್ಲಿ ಚರ್ಚೆಮಾಡಿ ಇದನ್ನು ಯಾವ ರೀತಿ ಉತ್ತಮಪಡಿಸಬೇಕೆಂಬುದನ್ನು ಯೋಚನೆಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ್.—ಸಂಸ್ಥಾನದಲ್ಲಿ ಈ ಕೈಗಾರಿಕೆಯನ್ನು ಅಭಿವೃದ್ಧಿಮಾಡುವುದಕ್ಕಾಗುವುದಿಲ್ಲವೆ?

Sri H. SIDDAVEERAPPA.—As I have already submitted, I will consult Sri Nagaraja Rao and try to find out how to renovate this industry and help these people.

ಶ್ರೀ ಜಿ. ದುಗ್ಗಪ್ಪ.—ಮೈಸೂರು ಸರ್ಕಾರದವರು ಈಗಾಗಲೇ ಇಂಡಿಯಾದೇಶದ ಹೊರಗಿನ ಸಂಸ್ಥಾನಗಳಿಗೆ ವೇತನಗಳನ್ನು ಕೊಟ್ಟು ಶಿಕ್ಷಣ ಪಡೆಯಲು ಎಷ್ಟು ಜನರನ್ನು ಕಳುಹಿಸಿದ್ದೀರಿ?

Sri H. SIDDAVEERAPPA.—Notice please.

ಶ್ರೀ ಜಿ. ದುಗ್ಗಪ್ಪ.—ಶಿಕ್ಷಣ ಪಡೆದು ಬಂದಿರುವವರು ಯಾವ ಯಾವ ಸ್ಥಳಗಳಲ್ಲಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಜನ ಎಂದು ಕೇಳಿದ ಹಿಂದಿನ ಪ್ರಶ್ನೆಗೇ ನೋಟೀಸ್ ಕೇಳಿದೆ; ಇದಕ್ಕೂ ನೋಟೀಸ್ ಬೇಕು; so this question does not arise.

Mr. SPEAKER.—Two days back, there was such a question. It consists of 180 people or so. You can find out who are sent out for training.

ಶ್ರೀ ಜಿ. ದುಗ್ಗಪ್ಪ.—ಈಗ ಚನ್ನಪಟ್ಟಣದ ಕೈಗಾರಿಕೆ ಪಾಠಶಾಲೆಯಲ್ಲಿರುವ ಶ್ರೀ ಎಚ್. ಟಿ. ರಾಮಯ್ಯನವರನ್ನು ಸ್ಪೆಷಲೈಜ್ ಮಾಡಿಕೊಂಡು ಬರಲು ಕಳುಹಿಸಬೇಕೆಂದು ಶಿಫಾರಸ್ ಮಾಡಿರಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಈ ವಿಚಾರದಲ್ಲಿ ವೆಸ್ಟ್ ಬೆಂಗಾಲ್ ಸರ್ಕಾರದವರೊಡನೆ ಪತ್ರವ್ಯವಹಾರ ನಡೆಸುತ್ತಿದ್ದ ವಿಚಾರ ಗೊತ್ತಿಲ್ಲವೇ?

Sri H. SIDDAVEERAPPA.—I will try to find out what exactly is the position.

ಶ್ರೀ ವಿ. ಆರ್. ನಾಯ್ಡು.—ಈಗ ನಮ್ಮ ಸಂಸ್ಥಾನದಲ್ಲಿ ಈ ಕೈಗಾರಿಕೆಯ ಬಗ್ಗೆ ಜನರಿಗೆ ಆಸಕ್ತಿ ಹುಟ್ಟಿಸುವಂತೆ ಮಾಡಲು ಒಬ್ಬ ಅಧಿಕಾರಿಗಳನ್ನು ಹೆಚ್ಚಿನ ಶಿಕ್ಷಣ ಪಡೆದು ಬರಲು ಪಶ್ಚಿಮ ಬಂಗಾಳಕ್ಕೆ ಕಳುಹಿಸುವುದಾಗಿ ಸರ್ಕಾರದವರು ಭರವಸೆ ಕೊಡಬಲ್ಲರೇ?

Mr. SPEAKER.—Such questions are unnecessary.

ಶ್ರೀ ವಿ. ಆರ್. ನಾಯ್ಡು.—ಈ ಕಂಪೆನಿಯ ವ್ಯಾಪಾರವನ್ನು ಅಭಿವೃದ್ಧಿಪಡಿಸುವುದಕ್ಕೇನು ಏರ್ಪಾಡು ಮಾಡಿದ್ದೀರಿ?

Sri H. SIDDAVEERAPPA.—I have already answered that question that the Government of India Expert is coming.

Sri R. ANANTARAMAN.—Have the Mysore Chrome Tanning Company opened shops in Bangalore City similar to the shops opened by the Bata Company? Is it not better that they open such shops and push the sale of their goods?

Sri H. SIDDAVEERAPPA.—I will consider that question.

Amounts collected under Payment of Wages Act, 1936.

Q.—219. Sri D. VENKATESH (Gandhinagar).—

Will the Government be pleased to state:—

(*a*) the total amount of fines collected under Section 8 of the Payment of Wages Act 1936 up-to-date, from January 1951 by each of the employers in the State;